ಓ.ಎಸ್ಃ 78/2018 ಪಿಡಬ್ಲೂ – 1

ದಿನಾಂಕಃ 27.08.2019 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಕೆ.ಎಸ್.ಜಿ.ಎಸ್. ವಕೀಲರಿಂದಃ**

ನಾನು ಎಸ್.ಎಸ್.ಎಲ್.ಸಿ. ಓದಿದ್ದು, ಡಿಪ್ಲೋಮಾ ಅಪೂರ್ಣಗೊಳಿಸಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದ ಅಂಶಗಳನ್ನು ನಾನು ಹೇಳಿ ಬರೆಸಿದ್ದೆ. ನಾನು ಈಗ ಯಾವುದೇ ವ್ಯವಹಾರ ಮಾಡುತ್ತಿಲ್ಲ. 2014–15 ರಿಂದ ಚಾಮರಾಜೇಶ್ವರ ಚೀಟ್ ಫಂಡ್‌ನಲ್ಲಿ ಕೆಲಸಕ್ಕೆ ಸೇರಿಕೊಂಡಿದ್ದೇನೆ. ನಾನು ಸಾಕ್ಷಿ ಪ್ರಮಾಣ ಪತ್ರದಲ್ಲಿ ನನ್ನ ಉದ್ಯೋಗ ವ್ಯಾಪಾರ ಎಂದು ಬರೆಸಿದ್ದು, ಏನು ಉದ್ಯೋಗ ಎಂದರೆ, ಆಫೀಸ್ ಬಾಯ್ ಎಂದು ಹೇಳುತ್ತಾರೆ. ದಿನಾಂಕಃ19.11.2018 ರಂದು ನಾನು ಸಾಕ್ಷಿ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ. ನಾನು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿದ ಕಾಲಕ್ಕೆ ನಾನು ಯಾವುದೇ ವ್ಯವಹಾರ ಮಾಡುತ್ತಿರಲಿಲ್ಲ ಎಂದರೆ ಸರಿ. ದಿನಾಂಕಃ19.11.2018 ಕ್ಕೆ ನಾನು ಯಾವುದೇ ವ್ಯವಹಾರ ಮಾಡುತ್ತಿರಲಿಲ್ಲ ಎಂದರೆ ಸರಿ. ನಾನು ಸಾಕ್ಷಿ ಪ್ರಮಾಣ ಪತ್ರದಲ್ಲಿ ದಿನಾಂಕಃ 19.11.2018 ರ ಸಮಯದಲ್ಲಿ ವ್ಯಾಪಾರ ಅಂತ ಉದ್ಯೋಗ ಬರೆದಿದ್ದು ತಪ್ಪು ಎಂದರೆ ಸರಿ. ನಾನು ತಪ್ಪು ಮಾಹಿತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ, ಕೈ ತಪ್ಪಿನಿಂದ ಆಗಿದೆ ಎಂದು ಹೇಳುತ್ತಾರೆ. ನಾನು ಸಲ್ಲಿಸಿರುವ ಇನ್ನೊಂದು ಸಾಕ್ಷಿ ಪ್ರಮಾಣ ಪತ್ರದಲ್ಲಿ ಕೂಡ ನನ್ನ ಉದ್ಯೋಗ ವ್ಯವಹಾರ ಅಂತ ಬರೆದಿದ್ದು, ತಪ್ಪಾಗಿರುತ್ತದೆ. ಒಬ್ಬ ವ್ಯಕ್ತಿಯನ್ನು ಚಾಮರಾಜೇಶ್ವರ ಚೀಟ್ಸ್ ಗೆ ಪರಿಚಯಿಸಿ, ಚೀಟಿ ಹಾಕಿಸಿದರೆ ಚಾಮರಾಜೇಶ್ವರ ಚೀಟ್ಸ್‌ನವರು ನನಗೆ ಕಮೀಷನ್ ಕೊಡುತ್ತಾರೆ. ನಾನು 2015 ಕ್ಕಿಂತ ಹಿಂದೆ ಚಾಮರಾಜೇಶ್ವರ ಚೀಟ್ಸ್ ನಲ್ಲಿ ಕಮೀಷನ್ ಏಜೆಂಟ್ ಆಗಿದ್ದೆ. ನಾನು ಆ ಸಮಯದಲ್ಲಿ ಏಜೆಂಟ್ ಆಗಿದ್ದ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿ. ನಾನು ಕಮೀಷನ್ ಪಡೆದ ಬಗ್ಗೆ ಸಧ್ಯಕ್ಕೆ ನನ್ನ ಹತ್ತಿರ ದಾಖಲೆ ಇರುವುದಿಲ್ಲ. ನಾನು ಏಜೆಂಟ್ ಅಂತ ತೋರಿಸಲು ನನ್ನ ಹತ್ತಿರ ಈಗ ದಾಖಲೆಗಳು ಇಲ್ಲ, ಕಮೀಷನ್ ನನ್ನ ಅಕೌಂಟ್‌ಗೆ ಜಮಾ ಆಗುತ್ತದೆ. ಒಬ್ಬ ವ್ಯಕ್ತಿಯನ್ನು ಚಾಮರಾಜೇಶ್ವರ ಚಿಟ್ಸ್ ಗೆ ಪರಿಚಯಿಸಿದರೆ, ನನಗೆ ಶೇಕಡ. 1 ಕಮೀಷನ್ ಕೊಡುತ್ತಿದ್ದರು. ಚೀಟಿ ಆರಂಭವಾಗಿ 8–10 ತಿಂಗಳ ಅವಧಿಯಲ್ಲಿ ಕಮೀಷನ್ನನ್ನು ನನಗೆ ಕೊಡುತ್ತಾರೆ. ನಾನು ಏಜೆಂಟ್ ಆಗಿ 15–20 ಜನರನ್ನು ಚಾಮರಾಜೇಶ್ವರ ಚೀಟ್ಸ್ ಗೆ ಪರಿಚಯಿಸಿರುತ್ತೇನೆ. ನನಗೆ ಕಮೀಷನ್‌ನಿಂದ ರೂ. ಒಂದರಿಂದ ಒಂದೂವರೆ ಲಕ್ಷ ಹಣ ಬಂದಿರುತ್ತದೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದೂಡಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಾಮರಾಜನಗರ.